



ಸೀಳಿಕೊಂಡಿತು. ಸರ್ಜನ್ ಅದರಲ್ಲಿ ಬೆರಳು ತೂರಿಸಿದರು. ಹೃದಯಕ್ಕೇ ಕೈ ಹಾಕಿದಂತೆನಿಸಿತು. ಅದೇ ಜಾಗಕ್ಕೆ ಕೊಂಚ ದೂರದಲ್ಲಿ ಮತ್ತೊಂದು ಸಣ್ಣ ಛೇದ ಮಾಡಿ, ಅದರೊಳಕ್ಕೆ ಬೆರಳು ತೂರಿಸಿ ಅಕ್ಟೋಪಸ್ ನುವೊ ಟಿಶ್ಯು ಸ್ಟೆಬಿಲೈಸರ್ ಸಾಧನವನ್ನು ಮತ್ತು ಥೋರಾ ಟ್ರ್ಯಾಕ್ ಎಂಐಸಿಎಸ್ ರಿಟ್ರ್ಯಾಕ್ಟರ್ ಸಿಸ್ಟಂ ಜೋಡಿಸಿದರು. ಪ್ಲಾಸ್ಟಿಕ್ ಸಾಫ್ಟ್ ಟಿಶ್ಯು ರಿಟ್ರ್ಯಾಕ್ಟರ್ ಅನ್ನು ಸಿಕ್ಕಿಸಿದರು. ಅದು ವರ್ತುಲಾಕಾರದಲ್ಲಿ ಚರ್ಮಕ್ಕೆ ಹೊಂದಿಕೊಂಡು ಒಂದು ಪೂರ್ಣ ಕಿಂಡಿಯಂತೆ ಜಾಗ ಮಾಡಿಕೊಟ್ಟಿತು. ಸುತ್ತ ಎರಡು ದೊಡ್ಡ ಕ್ಲ್ಯಾಂಪ್‌ಗಳನ್ನು ಹಾಕಿ ವರ್ತುಲಾಕಾರದಲ್ಲಿ ಕಿಂಡಿಯಾಗಿಸಿದರು. ಒಳಗಡೆಯಿಂದಲೇ ಹಿಗ್ಗಿಸಿದಂತೆ ಸೀಳಿಕೊಂಡ ಚರ್ಮದ ಪದರುಗಳಿಗೆ ಒಳಗಡೆಯಿಂದಲೇ ಸೂಕ್ತ ರಕ್ಷಣೆಯನ್ನು ಸೃಷ್ಟಿಸಿದರು. ದೇಹದ ಮತ್ತೊಂದು ಭಾಗದಲ್ಲಿ ಸಣ್ಣ ಸೀಳು ಮಾಡಿಕೊಂಡು ಅದರೊಳಗೆ ಸ್ಟಾರ್‌ಫಿಶ್ ಎನ್‌ಎಸ್ ಹಾರ್ಟ್ ಪೊಜಿಷನರ್ ತೂರಿಸಿದರು. ಕೈಗಳಲ್ಲಿ ಸೂಕ್ಷ್ಮ ಉಪಕರಣಗಳನ್ನು ಹಿಡಿದು ಕಿಂಡಿಯೊಳಕ್ಕೆ ತೂರಿಸಿ, ದೇಹದ ಒಂದೊಂದೇ ಪ್ರದೇಶವನ್ನು ಒಳಹೊಕ್ಕು ಹೃದಯದ ಹತ್ತಿರಕ್ಕೆ ತಲುಪಿದರು.

ಗೋಡೆ ಗಡಿಯಾರದೊಳಗಿನ ಲೋಲಕದ ಹೊಯ್ದಾಟದಂತೆ ಹೃದಯ ಬಡಿದುಕೊಳ್ಳುತ್ತಲೇ ಇತ್ತು! ಪೀಡಿತ ನಾಳವನ್ನು ಗುರುತಿಸಿ ಬ್ಲಾಕೇಜ್ ಇರುವ ಜಾಗಕ್ಕೆ ದೂರದ ಜಾಗದಲ್ಲಿ ಆಮ್ಲಜನಕಯುಕ್ತ ರಕ್ತವನ್ನು ಸಾಗಿಸುವ ಮೂಲ ರಕ್ತನಾಳಕ್ಕೆ ಒಂದು ಸಣ್ಣ ರಂಧ್ರ ಕೊರೆದು, ಅದಕ್ಕೆ ಮುಂಚೆಯೇ ಕೈಯಿಂದ ತೆಗೆದುಕೊಂಡ ರಕ್ತನಾಳವನ್ನು ಗ್ರಾಫ್ಟ್ ಮಾಡಿ ಉಳಿದ ಬ್ಲಾಕೇಜ್‌ಗಳಿಗೂ ಅದೇ ತಂತ್ರವನ್ನು ಅನುಸರಿಸಿ ಕಸಿ ಮಾಡಿದರು. ಕಸಿ ಮಾಡಿದ ರಕ್ತನಾಳ ಈಗ ಪರ್ಯಾಯ ಮಾರ್ಗವಾಗಿ ರೂಪುಗೊಂಡಿತು. ಎಲ್ಲ ಹೊಲಿಗೆಯ ಕೆಲಸ ಮಾಡಿದ ನಂತರ ಜೋಡಿಸಿದ ರಕ್ತನಾಳದಲ್ಲಿ ರಕ್ತ ಪರಿಚಲನೆ ಸೂಕ್ತವಾಗಿ ಆಗುತ್ತಿದೆಯೇ ಎನ್ನುವುದನ್ನು ಒಂದು ಉಪಕರಣದ ಮೂಲಕ ದಕ್ಷತೆ, ಕಾರ್ಯವೈಖರಿಯನ್ನು ಖಾತ್ರಿ ಮಾಡಿಕೊಂಡರು. ಹೃದಯವನ್ನು ಅದರ ಕವಚದೊಳಕ್ಕೆ ಭದ್ರವಾಗಿರಿಸಿ ಎದೆಗೂಡಿನ ಸೀಳಿಕೊಂಡ ಚರ್ಮದ ಒಂದೊಂದು ಭಾಗವನ್ನು ಮತ್ತೆ ಜೋಡಿಸಿ ಎದೆಪೆಟ್ಟಿಗೆಯೊಳಕ್ಕೆ ಹೃದಯನ್ನು ಸುಭದ್ರಗೊಳಿಸಿ, ಕಿಂಡಿ ಮುಚ್ಚಿದಾಗ ನಮಗೆಲ್ಲ ಮನುಷ್ಯನ ಅಂತಃಜಗತ್ತಿನ ದರ್ಶನವಾದಂತೆನಿಸಿತು.

ಸರ್ಜರಿಯ ಪ್ರತಿ ಹಂತವನ್ನು ವಿವರಿಸುತ್ತ ತಮ್ಮ ಕಾಯಕದಲ್ಲಿ ತೊಡಗಿಕೊಂಡಿದ್ದ ಡಾ. ಸಾತ್ಯಕಿ ತಮ್ಮ ನಿಗಾವನ್ನು ಒಂದು ಸೆಕೆಂಡಿನಷ್ಟೂ ಕದಲಿಸಲಿಲ್ಲ. ಮಾತನಾಡುತ್ತಲೇ ಸಹೋದ್ಯೋಗಿಗಳಿಗೆ ಮತ್ತು ನಮಗೆ ಕೆಲವು ವೈದ್ಯಕೀಯ ಸೂಕ್ಷ್ಮಗಳನ್ನು ವಿವರಿಸಿದರು. ಪ್ರತಿಯೊಂದು ಉಪಕರಣಗಳನ್ನು



